# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿರುವ ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳ ಸಕ್ರಮೀಕರಣದ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಡಿಇ 59 ಪಿಎಸ್‌ಆರ್ 2003 ದಿನಾಂಕ: 21-10-2003.
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 144 ಪಿಎಸ್‌ಆರ್ 2004 ದಿನಾಂಕ: 15-03-2005.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 170 ಪಿಎಸ್‌ಆರ್ 2006 ದಿನಾಂಕ: 31-10-2006.

MANAGING DIRECTOR
HESCOM., HUBLI
19 MAR 2011
RECEIVED

---

**ಪ್ರಸ್ತಾವನೆ:-**

1). 2003-04ರ ಸಾಲಿನಲ್ಲಿ ಸುಮಾರು 1.35 ಲಕ್ಷ ಅನಧಿಕೃತ ಪಂಪುಸೆಟ್ಟುಗಳಿದ್ದು, ಇಂತಹ ಅನಧಿಕೃತ ಪಂಪುಸೆಟ್ಟುಗಳ ಕನೆಕ್ಷನ್ ತೆಗೆದುಹಾಕುವುದು ಕಷ್ಟಕರವಾದ್ದರಿಂದ ಮತ್ತು ಇಂತಹ ಕನೆಕ್ಷನ್‌ಗಳಿಂದ ಟ್ರಾನ್ಸ್‌ಫಾರ್ಮರ್‌ಗಳಿಗೆ ಹೆಚ್ಚು ಲೋಡ್ ಆಗುವುದರಿಂದ, ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆ ಮತ್ತು ಹೆಚ್ಚು ನಷ್ಟ ಉಂಟಾಗುವುದರಿಂದ, ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶ ಸಂಖ್ಯೆ:ಡಿಇ 59 ಪಿಎಸ್‌ಆರ್ 2003, ದಿನಾಂಕ:21-10-2003ರಲ್ಲಿ OYT ಯೋಜನೆ ಅಡಿಯಲ್ಲಿ ರೂ.35,000/-ಗಳನ್ನು ಪಾವತಿಸುವ ಪ್ರತಿಯೊಬ್ಬ ಪಂಪ್‌ಸೆಟ್ ಬಳಕೆದಾರರ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲು ತೀರ್ಮಾನಿಸಲಾಗಿತ್ತು. ನಂತರ, ಈ ಮೊತ್ತವನ್ನು ರೂ.25,000/-ಕ್ಕೆ ಇಳಿಸಲಾಯಿತು. OYT ಯೋಜನೆ ಜಾರಿ ಮಾಡಿದ್ದರಿಂದ, 2004-05ರ ಸಾಲಿನಲ್ಲಿ ಹೊಸ ಪಂಪುಸೆಟ್ಟುಗಳ ವಿದ್ಯುದ್ದೀಕರಣ ಪ್ರಗತಿಯು ಬಹಳ ಕುಂಠಿತವಾಗಿದೆ. ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲು ವಿವಿಧ ಕಾರ್ಯಕ್ರಮ ಹಾಕಿಕೊಂಡಿದ್ದರೂ ಸಹ ವಿದ್ಯುತ್ ಸರಬರಾಜು ಕಂಪನಿಗಳಿಗೆ ರಿಯಾಯಿತಿ ದರದಷ್ಟು ಶುಲ್ಕವನ್ನು ಸಹ ಸಂಗ್ರಹಿಸಲು ಸಾಧ್ಯವಾಗಿರುವುದಿಲ್ಲ.

2) ಈ ಸಮಸ್ಯೆಯ ನಿವಾರಣೆಗಾಗಿ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆಇಎನ್ 144 ಪಿಎಸ್‌ಆರ್ 2004, ದಿನಾಂಕ:15-03-2005ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:-

i) OYT ಯೋಜನೆಯನ್ನು ಅನುಸರಿಸದೆ ದಿನಾಂಕ:31-12-2004ರಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಅನಧಿಕೃತ ಪಂಪುಸೆಟ್‌ಗಳನ್ನು ಸಕ್ರಮಗೊಳಿಸುವುದು ಮತ್ತು ವಾಡಿಕೆಯಂತೆ ಪಾವತಿಸುವ ವಾರ್ಷಿಕ ಕನಿಷ್ಠ ಠೇವಣಿ ಮತ್ತು ಮೀಟರ್‌ನ ಭದ್ರತಾ ಠೇವಣಿಯೊಂದಿಗೆ ಪ್ರತ್ಯೇಕವಾಗಿ ಪ್ರತಿ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲು ರೂ.10,000/-ಗಳನ್ನು ಸಂಗ್ರಹಿಸುವುದು.

MANAGING DIRECTOR
HESCOM., HUBLI
21 MAR 2011
IN. No.

ಬಿ) ಅನಧಿಕೃತ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲು ಎಸ್ಕಾಂಗಳಿಗೆ ಏಕಕಾಲಿಕ ಸಹಾಯಕವಾಗಿ (One time support) ರೂ.173.66 ಕೋಟಿಯನ್ನು ಮಂಜೂರು ಮಾಡುವುದು.

ಸಿ) ಸಕ್ರಮಗೊಳಿಸುವ ಈ ಯೋಜನೆಯನ್ನು ರೈತರಿಗೆ ಕೊನೆ ಅವಕಾಶವಾಗಿ ಪ್ರಕಟಿಸುವುದು ಮತ್ತು ಈ ಯೋಜನೆಯನ್ನು 30-04-2005ರ ನಂತರ ವಿಸ್ತರಿಸದಿರುವುದು.

ಡಿ) ಈ ಹಿಂದೆ ಆಚರಣೆಯಲ್ಲಿದ್ದ OYT ಯೋಜನೆಯನ್ನು ಹಿಂದಕ್ಕೆ ಪಡೆದು 2005-06ನೇ ಸಾಲಿನಲ್ಲಿ ರೂ.232.02 ವೆಚ್ಚದಲ್ಲಿ 60,000 ಹೊಸ ಪಂಪುಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡುವುದು.

ಇ) 60,000 ಹೊಸ ಪಂಪುಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡುವ ಸಲುವಾಗಿ ಸರ್ಕಾರದಿಂದ ಸಹಾಯವಾಗಿ ರೂ.60 ಕೋಟಿಗಳನ್ನು ಮಂಜೂರು ಮಾಡುವುದು. ಉಳಿದ ವೆಚ್ಚವಾದ ರೂ.172.03 ಕೋಟಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೇ ಭರಿಸುವುದು.

ಎಫ್) OYT ಯೋಜನೆಯಂತೆ ಹೊಸ ಪಂಪುಸೆಟ್‌ಗಳ ವಿದ್ಯುದ್ದೀಕರಣ-ಗೊಳಿಸುವುದನ್ನು ಕೇವಲ ಐಚ್ಛಿಕವನ್ನಾಗಿಸುವುದು.

3) ಸಕ್ರಮಗೊಳಿಸಲಾದ ಎಲ್ಲಾ ಪಂಪುಸೆಟ್ಟುಗಳ ಸಂಪರ್ಕಗಳಿಗೆ ಮತ್ತು ಹೊಸದಾಗಿ ಸಂಪರ್ಕ ನೀಡಲಾದ ಪಂಪುಸೆಟ್ಟುಗಳಿಗೆ ಕಡ್ಡಾಯವಾಗಿ ಮೀಟರ್‌ನ್ನು ಅಳವಡಿಸುವುದು. ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣ ಅವಧಿಯನ್ನು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ:31-03-2007ರವರೆಗೆ ವಿಸ್ತರಿಸಲಾಗಿತ್ತು. ಅನಂತರದ ಅವಧಿಯಲ್ಲಿ ದಿನದಿಂದ ದಿನಕ್ಕೆ ಅನಧಿಕೃತ ಪಂಪ್‌ಸೆಟ್‌ಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತಿದ್ದು ವಿತರಣಾ ಕಂಪನಿಗಳಿಗೆ ಇವುಗಳ ನಿಯಂತ್ರಣವು ಕಷ್ಟವಾಗುತ್ತಿದೆ. ಡಿಸೆಂಬರ್ 2010 ರ ಕೊನೆಯ ವೇಳೆಗೆ ರಾಜ್ಯದಲ್ಲಿ ಸುಮಾರು ಒಂದೂವರೆ ಲಕ್ಷ ಅನಧಿಕೃತ ಪಂಪ್‌ಸೆಟ್‌ಗಳಿರುತ್ತವೆ.

4) ಸರ್ಕಾರವು ರೈತರಿಗೆ ನೀಡಿದ ಆಶ್ವಾಸನೆಯಂತೆ 10 ಅಶ್ವಶಕ್ತಿವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಆಗಸ್ಟ್ 2008 ರಿಂದ ಉಚಿತ ವಿದ್ಯುತ್ ಸರಬರಾಜಿನ ಘೋಷಣೆ ಮಾಡಿರುತ್ತದೆ. ಇದನ್ನು ಮನಗಂಡಿರುವ ರೈತರು ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮಕ್ಕೆ ಮುಂದಾಗುತ್ತಿಲ್ಲ.

5) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ತಮ್ಮ ಪತ್ರ ಸಂಖ್ಯೆ: 1/06/1931 ದಿನಾಂಕ:18-12-2006 ರಲ್ಲಿ ಪದೇ ಪದೇ ವಿಸ್ತರಿಸುತ್ತಿರುವ ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣ ಕಾರ್ಯವನ್ನು ಆಕ್ಷೇಪಿಸಿದೆ.

6) ಈ ಸಂಬಂಧ ಒಂದು ನಿರ್ದಿಷ್ಟ ನಿಯಮಾವಳಿಯನ್ನು ರೂಪಿಸುವ ಸಲುವಾಗಿ ದಿನಾಂಕ:15–01–2009 ರಂದು ಸಭೆಯನ್ನು ಕರೆದು ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣಕ್ಕೆ ಸಂಬಂಧಿಸಿದಂತೆ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಲಾಯಿತು:–

- ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳು ವಿತರಣಾ ಜಾಲಕ್ಕೆ ನಿರಂತರವಾಗಿ ಸೇರ್ಪಡೆಗೊಳ್ಳುತ್ತಿರುವುದು ಒಂದು ಚಲನಾತ್ಮಕ ಪದ್ಧತಿಯಾಗಿರುವುದನ್ನು ಖಾತರಿ ಪಡಿಸಿಕೊಳ್ಳಲಾಯಿತು.

- ರೈತರು ತಮ್ಮ ಜಮೀನಿನಲ್ಲಿ ಕೊಳವೆ ಬಾವಿಗಳನ್ನು ಯಾವುದೇ ಇಲಾಖೆಯ ನಿರ್ಬಂಧವಿಲ್ಲದೆ ಎಲ್ಲೆಂದರಲ್ಲಿ ತೋಡುತ್ತಿರುತ್ತಾರೆ. ಸ್ಥಳದ ಅಂತರ್ಜಲ ಪ್ರಮಾಣದ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆಯುತ್ತಿಲ್ಲ.

- ಈ ಹಿಂದೆ ಗಣಿ ಮತ್ತು ಭೂಗರ್ಭ ಇಲಾಖೆಯು 2001 ರಲ್ಲಿ ಹೊರಡಿಸಿದ್ದ ಆದೇಶದ ಪ್ರಕಾರ ಕಪ್ಪು ಮತ್ತು ಬೂದು ತಾಲ್ಲೂಕುಗಳಲ್ಲಿ ಕೊಳವೆ ಬಾವಿ ತೋಡುವುದನ್ನು ನಿರ್ಬಂಧಿಸಿತ್ತು. ಆದರೆ ಅದರಂತೆ ಕಪ್ಪು ತಾಲ್ಲೂಕುಗಳಲ್ಲಿ ಕೊಳವೆ ಬಾವಿಗಳನ್ನು ತೋಡುವುದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿರುವುದಿಲ್ಲ.

- ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಫಲಾನುಭವಿಗಳಿಗೆ ಸೇರಿದ ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಪರ್ಕವು ನಿರ್ದಿಷ್ಟ ಯೋಜನೆಗಳ ಮುಖಾಂತರ ದೊರೆತು ಸಕ್ರಮಗೊಳ್ಳುತ್ತಿವೆ. ಆದರೆ ಸಾಮಾನ್ಯ ವರ್ಗದ ಜನರಿಗೆ ಸೇರಿದ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಯಾವುದೇ ಯೋಜನೆಗಳಿರುವುದಿಲ್ಲ. ಇದರಿಂದಾಗಿ ಅನಧಿಕೃತ ಪಂಪ್‌ಸೆಟ್‌ಗಳ ಪ್ರಮಾಣ ಹೆಚ್ಚುತ್ತಿದೆ.

- ಹಾಲಿ ಇರುವ ವಿದ್ಯುತ್ ವಿತರಣಾ ಮಾರ್ಗದಿಂದ ದೂರದಲ್ಲಿರುವ ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳ ಸಕ್ರಮೀಕರಣಕ್ಕೆ ವಿತರಣಾ ಕಂಪನಿಗಳು ಹೊಸದಾಗಿ ವಿದ್ಯುತ್ ಮಾರ್ಗ ಸೌಕರ್ಯವನ್ನು ಕಲ್ಪಿಸಲು ಪ್ರತಿ ಪಂಪ್‌ಸೆಟ್‌ಗೆ ಅಂತಹ ಪ್ರಕರಣಗಳಲ್ಲಿ ಅಂದಾಜು ರೂ. 70,000/– ವೆಚ್ಚವಾಗಲಿದೆ. ಇದರಿಂದ ವಿತರಣಾ ಕಂಪನಿಗಳಿಗೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ.

- ಅನಧಿಕೃತ ಪಂಪ್‌ಸೆಟ್‌ಗಳಿಗೆ ಅಳವಡಿಸಿರುವ ಕಳಪೆ ಗುಣಮಟ್ಟದ ವೈರಿಂಗ್ ಮತ್ತು ಉದ್ದನೆಯ ಸೇವಾ ಮಾರ್ಗದಿಂದ ವಿದ್ಯುತ್ ಅಪಘಾತವು ಉಂಟಾಗುವ ಸಂಭವವಿರುತ್ತದೆ. ಇದರಿಂದ ಮನುಷ್ಯ ಅಥವಾ ಪ್ರಾಣಿಗಳ ಜೀವ ಮತ್ತು ಆಸ್ತಿಗೆ ಹಾನಿ ಉಂಟಾಗುವ ಅಪಾಯವಿದೆ.

- ಅನಧಿಕೃತ ಪಂಪ್‌ಸೆಟ್‌ಗಳು ಬಳಸುವ ವಿದ್ಯುಚ್ಛಕ್ತಿ ಮತ್ತು ಅವುಗಳಿಂದ ಉಂಟಾಗುವ ವಿತರಣಾ ನಷ್ಟವು ಲೆಕ್ಕಕ್ಕೆ ಸಿಗುತ್ತಿಲ್ಲ. ಅಂದಾಜಿನ ಪ್ರಕಾರ ದಿನದ ವಿದ್ಯುಚ್ಛಕ್ತಿ ಬಳಕೆಯ ಸುಮಾರು 40–45% ವಿದ್ಯುಚ್ಛಕ್ತಿಯನ್ನು ಪಂಪ್‌ಸೆಟ್‌ಗಳು ಬಳಸುತ್ತಿದೆ.

7) ದಿನಾಂಕ 11.5.2010 ರಂದು ವಿಧಾನ ಸಭೆಯ ಅಂದಾಜು ಸಮಿತಿ ಸಭೆಯಲ್ಲಿ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಹೆಚ್ಚಾಗಿದ್ದು ಇದರಿಂದ ಅನಧಿಕೃತ ವಿದ್ಯುತ್ ಬಳಕೆ ಹೆಚ್ಚಾಗುತ್ತಿದೆ ಮತ್ತು ವಿತರಣಾ ಪರಿವರ್ತಕಗಳ ಮೇಲಿನ ಹೊರೆ ಹೆಚ್ಚಾಗಿ, ಪರಿವರ್ತಕಗಳು ವಿಫಲವಾಗುತ್ತಿವೆ. ಇದನ್ನು ತಡೆಗಟ್ಟಿ ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣಗೊಳಿಸಲು ಒಂದು ನಿರ್ದಿಷ್ಟ ಕಾರ್ಯನೀತಿ ರೂಪಿಸಿ ಪ್ರಕಟಿಸಬೇಕೆಂದು ಅಂದಾಜು ಸಮಿತಿ ಸದಸ್ಯರು ತಿಳಿಸಿರುತ್ತಾರೆ.

8) ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮೀಕರಣಗೊಳಿಸುವ ಬಗ್ಗೆ ಪರಿಶೀಲಿಸಲಾಗಿದೆ. ಈ ಕುರಿತು ಇಂಧನ ಇಲಾಖೆಯು ಒಂದು ನೀತಿಯನ್ನು ರೂಪಿಸುವ ಅವಶ್ಯವಿದೆಯೆಂದು ತಿಳಿಸಿರುತ್ತಾರೆ.

9) ಮೇಲೆ ತಿಳಿಸಿದ ಕಾರಣಗಳಿಂದಾಗಿ, ಅನಧಿಕೃತ ಪಂಪುಸೆಟ್ಟುಗಳ ಸಕ್ರಮೀಕರಣಗೊಳಿಸುವ ಬಗ್ಗೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ:–

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 09 ಪಿಎಸ್‌ಆರ್ 2011, ಬೆಂಗಳೂರು, ದಿನಾಂಕ:11–3–2011**

ರಾಜ್ಯದ ಎಲ್ಲಾ ವಿತರಣಾ ಕಂಪನಿಗಳ ವ್ಯಾಪ್ತಿಯಲ್ಲಿ ಬರುವ ಅಕ್ರಮ ನೀರಾವರಿ ಪಂಪ್ ಸೆಟ್ ಗಳನ್ನು ಸಕ್ರಮಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:–

1) ನೀರಾವರಿ ಕಾಲುವೆಗಳಿಂದ ಅನಧಿಕೃತವಾಗಿ ನೀರನ್ನು ಬಳಸುತ್ತಿರುವ ಕೃಷಿ ಪಂಪ್ ಸೆಟ್‌ಗಳನ್ನು ಹೊರತುಪಡಿಸಿ, 28–2–2011 ರ ಅಂತ್ಯಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು (ಕಪ್ಪು ಮತ್ತು ಬೂದು ಪ್ರದೇಶಗಳಲ್ಲಿರುವ ಕೃಷಿ ಪಂಪ್ ಸೆಟ್‌ಗಳೂ ಸೇರಿದಂತೆ) ಸಕ್ರಮೀಕರಣಗೊಳಿಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಅನುಮತಿ ನೀಡಲಾಗಿದೆ.

2) ಮಾಪಕ ಭದ್ರತಾ ಠೇವಣಿ ಹೊರತುಪಡಿಸಿ ಪ್ರತಿ ನೀರಾವರಿ ಪಂಪ್‌ಸೆಟ್‌ಗೆ ರೂ. 10,000 ಜೊತೆಗೆ 2 ತಿಂಗಳ ಕನಿಷ್ಠ ಠೇವಣಿ (2 ಎಂ.ಎಂ.ಡಿ) ಹಣವನ್ನು ಫಲಾನುಭವಿಗಳಿಂದ ಪಡೆಯತಕ್ಕದ್ದು.

3) ಈ ಸಂಬಂಧ ತಗಲುವ ವೆಚ್ಚದಲ್ಲಿ ಪ್ರತಿ ನೀರಾವರಿ ಪಂಪ್‌ಸೆಟ್‌ಗೆ ರೂ.25,000/- ರವರೆಗೆ ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ. ಬಾಕಿ ಉಳಿದ ವೆಚ್ಚವನ್ನು ವಿತರಣಾ ಕಂಪನಿಗಳು ಭರಿಸಬೇಕಾಗಿರುತ್ತದೆ.

4) ಕೃಷಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಪೂರೈಸುವ ವಿತರಣಾ ಪರಿವರ್ತಕ ಕೇಂದ್ರಗಳಲ್ಲಿ ವಿದ್ಯುತ್ ಮಾಪಕಗಳನ್ನು ಅಳವಡಿಸತಕ್ಕದ್ದು.

5) 28-2-2011ರ ನಂತರ ಅನಧಿಕೃತ ವಿದ್ಯುತ್ ಸಂಪರ್ಕ ಪಡೆಯುವ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸ್ಥಗಿತಗೊಳಿಸಿ ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸತಕ್ಕದ್ದು.

ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು ದಿನಾಂಕ: 30-9-2011ರವರೆಗೆ ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆ. ಆನಂತರ ಸಂಪರ್ಕದಲ್ಲಿರುವ ಅಕ್ರಮ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನಿಲುಗಡೆಗೊಳಿಸಿ ಕಾನೂನಿನ ಪ್ರಕಾರ ಕ್ರಮ ಜರುಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ: FD 748 EXP-1/09 ದಿನಾಂಕ: 09-12-2009ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುರೇಶ್ ಬಿ. ಕೃಷ್ಣಪ್ಪನವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಇವರಿಗೆ:-

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯಪತ್ರ ಪ್ರಕಟಣೆಗಾಗಿ.

ಪ್ರತಿ:-

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ. 82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ, ಹೆಸ್ಕಾಂ ಮತ್ತು ಸೆಸ್ಕ್.
5. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ. ರಸ್ತೆ ಬೆಂಗಳೂರು.
6. ಮುಖ್ಯ ವಿದ್ಯುತ್ ಪರಿವೀಕ್ಷಕರು, ನಂ :32/1-2, ಕ್ರೆಸೆಂಟ್ ಟವರ್ಸ್, ಕ್ರೆಸೆಂಟ್ ರಸ್ತೆ ಬೆಂಗಳೂರು-1
7. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
9. ವಿಶೇಷಾಧಿಕಾರಿ (ಸುಧಾರಣೆ) /ಕಾರ್ಯಪಾಲಕ ಅಭಿಯಂತರರು (ಯೋಜನೆ/ಇ.ಎಂ.ಸಿ-1, 2 &3), ಇಂಧನ ಇಲಾಖೆ.

10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12. ಮುಖ್ಯ ಇಂಜಿನಿಯರ್ (ವಿ), ವಿದ್ಯುತ್ ರವಾನೆ ಕೇಂದ್ರ, ಕೆಪಿಟಿಸಿಎಲ್, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.

Memo No: HESCOM/GM(T)/E-3/10-11/CYS-1770 Date : 26.3.2011

Copies for information and needful action :

1. The Chief Engineer (Ele), O&M Zone, HESCOM, Hubli / Belgaum.
2. The Superintending Engineer (Ele), O&M Circle, HESCOM, Hubli / Haveri / Sirsi / Belgaum / Chikkodi / Bijapur / Bagalkot.
3. The Superintending Engineer (Ele), PMC / (T&P), Corporate Office, HESCOM, Hubli.
4. The Controller (I/A), Controller (F&A), Corporate Office HESCOM, Hubli.
5. All the Executive Engineer (Ele), O&M Division/CSC, HESCOM.
6. All the Executive Engineer (Ele), Corporate Office, HESCOM Hubli.
7. All the Deputy Controllers, Corporate Office, HESCOM Hubli.

General Manager
(Tech/Admn & HRD)